**ಸಾಕ್ಷಿಯನ್ನು ದಿನಾಂಕ 20.08.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ವಿ.ವಿ ವಕೀಲರಿಂದಃ**

11. ನಿ.ಪಿ.–2 ರ ಕ್ರಯ ಪತ್ರದಲ್ಲಿ ಖರೀದಿಸಲಾದ ಆಸ್ತಿಯ ದಕ್ಷಿಣ ದಿಕ್ಕಿಗೆ ಮಾಂಸದ ಅಂಗಡಿ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. 2012 ಕ್ಕೂ ಮೊದಲೇ ಸದರಿ ಮಾಂಸದ ಅಂಗಡಿ ಇತ್ತು ಎಂದರೆ ಸಾಕ್ಷಿ ಅದು ನನ್ನ ಹೆಂಡತಿ ಹೆಸರಿಗೆ ಇತ್ತು ಎನ್ನುತ್ತಾರೆ. ನನ್ನ ಹೆಂಡತಿ ಹೆಸರಿಗೆ ಸದರಿ ಅಂಗಡಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ಹೆಂಡತಿ ಹೆಸರಿಗೆ ಸದರಿ ಅಂಗಡಿ ಇರುವ ಜಾಗವನ್ನು ಖರೀದಿ ಮಾಡಲಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

12. ಈಗ ನನಗೆ ತೋರಿಸಲಾದ ಫೋಟೋದಲ್ಲಿ ಕಾಣುವ ಶಿವಾಜಿ ಮಟನ್ ಸ್ಟಾಲ್ ಅಂಗಡಿ ಯಾರುದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಅಂಗಡಿಗೆ ಸಂಬಂಧಪಟ್ಟಂತೆ ನಾನು ಈ ದಾವ ದಾಖಲಿಸಿಲ್ಲ. ಸಾಕ್ಷಿ ನಿರಾಕರಿಸಿದ ಫೋಟೋವನ್ನು ನ್ಯಾಯಾಲಯದ ಪರಿಶೀಲನೆಗಾಗಿ **ನಿಸಿ–1** ಎಂದು ಗುರುತಿಸಲಾಯಿತು.

13. ನಿ.ಪಿ.–1 ರ ಕ್ರಯ ಪತ್ರದಡಿ ನಾನು ಖರೀದಿ ಮಾಡಿದ ಪಶ್ಚಿಮ ದಿಕ್ಕಿಗೆ 15 ರಿಂದ 20 ಅಡಿ ವಿಸ್ತೀರ್ಣ ಕನ್ಸರ್ವೆನ್ಸಿ ರಸ್ತೆ ಇದೆ. ಸದರಿ ರಸ್ತೆಯ ಪಕ್ಕದಲ್ಲಿ ಬೇರೆಯವರ ಮನೆ ಇದೆ

ಎಂದರೆ ಸರಿ. ಕನ್ಸರ್ವೆನ್ಸಿ ರಸ್ತೆ ಈಗಲೂ ಇದೆ ಮತ್ತು ಅದರಲ್ಲಿ ಜನ ಓಡಾಡುತ್ತಾರೆ. ಈಗ ನನಗೆ ತೋರಿಸಲಾದ ಫೋಟೋದಲ್ಲಿ ಕಾಣುವ ಜಾಗ ನನಗೆ ಸೇರಿದ ನಿವೇಶನ ಸಂಖ್ಯೆ 117 ರಲ್ಲಿದೆ. ಸಾಕ್ಷಿ ಸ್ವ ಇಚ್ಚೆಯಿಂದ ನನ್ನ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿ ಫೋಟೋದಲ್ಲಿ ಕಾಣುವ ಕಟ್ಟಡವನ್ನು ಪ್ರತಿವಾದಿ ಕಟ್ಟುತ್ತಿದ್ದಾರೆ ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು **ನಿಡಿ-2** ಎಂದು ಗುರುತಿಸಲಾಯಿತು. ನಿಡಿ-2 ರ ಫೋಟೋದಲ್ಲಿ ಕಾಣುವ ಗೋಡೆಯನ್ನು ಪ್ರತಿವಾದಿ 2 ವರ್ಷದ ಹಿಂದೆ ಕಟ್ಟಿದ್ದಾರೆ. ನಾವು ದೇವಸ್ಥಾನಕ್ಕೆ ಹೊಗಿದ್ದಾಗ ರಾತ್ರೋ ರಾತ್ರಿ ಕಟ್ಟಿದ್ದಾರೆ ಎನ್ನುತ್ತಾರೆ. ಆ ಸಂಬಂಧ ಪ್ರತಿವಾದಿಯರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದೇನೆ. ದೂರಿಗೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೋ ಇಲ್ಲವೊ ನನಗೆ ನೆನಪಿಲ್ಲ. ಯಾವುದೇ ದೂರು ಕೊಡದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಾಗವನ್ನು ಪ್ರತಿವಾದಿ ಯಾವತ್ತು ಒತ್ತುವರಿ ಮಾಡಿಲ್ಲ ಮತ್ತು ಅವರ ಜಾಗದಲ್ಲಿ ಅವರು ಕಟ್ಟಡ ಕಟ್ಟಿದ್ದಾರೆ ಎನ್ನುವುದು ಸುಳ್ಳು. ನಿಡಿ-2 ರ ಫೋಟೋದಲ್ಲಿ ಕಾಣುವ ಗೋಡೆ ಕಟ್ಟಿರುವ ಜಾಗ ಅಂದಾಜು 22 ಅಡಿ ಅಗಲವಿದೆ. ಗೋಡೆ ಅಂದಾಜು 20 ಅಡಿ ಅಗಲವಿದೆ.

14. ಕನ್ಸರ್ವೆನ್ಸಿ ರಸ್ತೆಯ ಪಶ್ಚಿಮ ದಿಕ್ಕಿಗೆ ನನಗೆ ಸೇರಿದ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ವರ್ಣಿಸಿರುವ ವಿಸ್ತೀರ್ಣ ಮತ್ತು ಚಕ್ಕುಬಂಧಿಗೆ ಒಳಪಟ್ಟು ಯಾವುದೇ ಆಸ್ತಿ ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿ ಇಲ್ಲದ ಜಾಗಕ್ಕೆ ಸುಳ್ಳು

ದಾಖಲೆಗಳನ್ನು ಸೃಷ್ಟಿಮಾಡಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ ಜಾಗದಲ್ಲಿ ಮಾಂಸದ ಅಂಗಡಿ ಇದೆ ಎಂದು ಗೊತ್ತಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಅವರ ತಂದೆ ಕಾಲದಿಂದಲೂ ಮತ್ತು 20 ವರ್ಷಗಳಿಂದಲೂ ಮಾಂಸದ ಅಂಗಡಿ ನಡೆಯುತ್ತಿದ್ದಾರೆ ಎನ್ನುವುದು ಸುಳ್ಳು. ನಿ.ಪಿ.–1 ರಂತೆ ನಾನು ಕ್ರಯ ಪತ್ರ ಮಾಡಿಕೊಳ್ಳುವ ಮೊದಲೇ ಮೊದಲಿನಿಂದಲೇ ಪ್ರತಿವಾದಿ ಮಾಂಸದ ಅಂಗಡಿ ಇಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸತ್ಯಾಂಶ ಮರೆಮಾಚಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.–1 ರಿಂದ 35 ರ ದಾಖಲೆಗಳನ್ನು ಈ ದಾವೆ ಸಲುವಾಗಿ ಸೃಷ್ಟಿಮಾಡಿದ್ದೇನೆ ಎನ್ನುವುದು ಸುಳ್ಳು.

15. ಈ ದಾವೆ ದಾಖಲಿಸಿದ ನಂತರ ನಾನು ಪ್ರತಿವಾದಿಯ ಜಾಗಕ್ಕೆ ತೊಂದರೆ ಕೊಟ್ಟಿದ್ದರಿಂದ ಅವರು ನನ್ನ ವಿರುದ್ಧ ಪೊಲೀಸ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಹೆದರಿಸುವ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದಾರೆ ಎನ್ನುತ್ತಾರೆ. ನ್ಯಾಯಾಲಯದಲ್ಲಿ ಈ ದಾವೆ ಚಾಲ್ತಿ ಇದ್ದರೂ ಸಹ ನಾನು ದಬ್ಬಾಳಿಕೆ ಮಾಡಿದ್ದರಿಂದ ಪ್ರತಿವಾದಿ ದೂರು ಕೊಟ್ಟಿದ್ದಾರೆ ಎನ್ನುವುದು ಸುಳ್ಳು. ನಾನು ಅವರ ಜಾಗಕ್ಕೆ ತೊಂದರೆ ಕೊಡುತ್ತಿರುವುದರಿಂದ ಪ್ರತಿವಾದಿ ನನ್ನ ವಿರುದ್ಧ ಪ್ರತ್ಯೇಕ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳು ದಾವೆ ಹಾಕಿದ್ದಾರೆ ಎನ್ನುತ್ತಾರೆ. ಅಸ್ತಿತ್ವದಲ್ಲಿ ಇಲ್ಲದ ಸ್ವತ್ತಿನ ಸಂಬಂಧ ನಿ.ಪಿ.– 1 ರ ಕ್ರಯ ಪತ್ರ ಮಾಡಿಕೊಂಡಿದ್ದೇನೆ ಎನ್ನುವುದು ಸುಳ್ಳು. ನನ್ನ ಹೆಂಡತಿ ಹೆಸರಿಗೆ ಖರೀದಿಸಲಾದ ಜಾಗದಲ್ಲಿ ಮಾಂಸದ ಅಂಗಡಿ

ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

16. ಪ್ರತಿವಾದಿಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**